# ಸುಮುಹೂರ್ತೇ ಸಾವಧಾನ!

ಗೋಪಾಲಕೃಷ್ಣ ಹೆಗಡೆ



ಶಿಲ್ಪಾ ಕಬ್ಬಿಣಕಂತಿ

ನನಗೆ ಹಾಗೆಲ್ಲ ಸಿಟ್ಟು ಬರುವುದಿಲ್ಲ. ಸಿಟ್ಟು ಬಂದರೆ ನಾನು ಮನುಷ್ಯ ಅಲ್ಲ ಹುಚ್ಚ. ಹಳೇ ಹುಚ್ಚ! ನನಗೆ ಸಿಟ್ಟು ಬಂದರೆ ನಾನು ಏನು ಮಾಡ್ತೇನೆ, ಏನು ಹೇಳ್ತೇನೆ ಎನ್ನುವುದು ನನಗೇ ಗೊತ್ತಿಲ್ಲ ಮುಂತಾಗಿ ನಮ್ಮ ನೆರೆಮನೆಯ ಶಂಭೂಕಾಕನ ಮಗ ಸುಬ್ರೀತ ತಮ್ಮ ಮನೆಯ ಜಗುಲಿಯ ಮೇಲೆ ಕುಳಿತು ಒದರಾಡುತ್ತಿದ್ದುದು ನಮ್ಮ ಮನೆಗೆ ಸ್ಪಷ್ಟವಾಗಿಯೇ ಕೇಳಿಸುತ್ತಿತ್ತು. ಆದರೆ ಆಮೇಲೆ ಅವನಿಗೆ ಅಂಥ ಸಿಟ್ಟೇನೂ ಬಂದ ಹಾಗಿಲ್ಲ. ಸುಬ್ರೀತ ಶಾಲೆ ಪಾಲೆ ಅಂತ ಕಾಲ ಕಳೆದವನಲ್ಲ. ಬಲ್ಲವರು ಹೇಳುವ ಹಾಗೆ ಸಮಾಜವೇ ಆತನಿಗೆ ಪಾಠಶಾಲೆಯಾಗಿತ್ತು. ಹದಿನಾಲ್ಕನೆ ವರ್ಷಕ್ಕೆ ಆತ ಬೀಡಿ ಸೇದಿದ. ಹದಿನಾರಕ್ಕೆ ಕೊಟ್ಟೆ ರುಚಿ ನೋಡಿದ. ಹದಿನೆಂಟಕ್ಕೆ ಕದ್ದು ಕದ್ದು ಕ್ಲಬ್ಬಿಗೆ ಹೋಗತೊಡಗಿದ. ಇಪ್ಪತ್ತೆರಡು ವರ್ಷ ತುಂಬುವಾಗ ಕಲಿತ ವಿದ್ಯೆಯಲ್ಲೆಲ್ಲ ಸ್ನಾತಕೋತ್ತರ ಪದವಿ ಪಡೆದು ಚಿಲ್ಲರೆ ಉಪ ಕಸುಬುಗಳೆಲ್ಲವನ್ನೂ ಕಲಿತ. ಯಾವ ಶಾಲೆ ಕಾಲೇಜುಗಳೂ ಕಲಿಸದಷ್ಟು ಶಾಣೇತನ ಗಳಿಸಿಕೊಂಡ. ಲೋಕಾನುಭವದ ಮುಂದೆ ಬೇರೆ ಮತ್ತೇನಿದೆ ಸುಡುಗಾಡು? ಉಂಡಾಡಿಯಾಗಿ ಊರೆಲ್ಲ ತಿರುಗುತ್ತಿದ್ದ ಮಗನನ್ನು ಕಂಡು ಶಂಭೂಕಾಕ ಅದನ್ನೇ ತನ್ನ ಬೋಳು ತಲೆಗೆ ಹಚ್ಚಿಕೊಂಡಿದ್ದನೇ ಹೊರತು ಸುಬ್ರೀತ ಹಾಯಾಗಿ ಒಂದೊಂದೇ ವರ್ಷ ದಾಟುತ್ತ ಮೂವತ್ತಕ್ಕೆ ಬಂದು ಮುಟ್ಟಿದ. ಇನ್ನಾದರೂ ಸುಬ್ರೀತ ಒಂದು ಮದುವೆ ಅಂತ ಆಗಬೇಡವೇ?

ಆಗಬೇಕಿತ್ತು ಖರೆ! ಆದರೆ ಸುಬ್ರೀತ ಒಪ್ಪಬೇಕಲ್ಲ. ಆತನನ್ನು ಖುದ್ದು ಶಂಭೂಕಾಕನೇ ಕೇಳಿದಾಗ ಅಷ್ಟೇನು ಅವಸರ ಈಗ? ಸದ್ಯ ನಾನು ಮದುವೆಯಾಗೋದೇ ಇಲ್ಲ ಎಂದು ಬಿಟ್ಟಿದ್ದ.

'ಸುಬ್ರೀತಾ, ನನ್ನ ಮಾತು ಕೇಳು. ನಿನಗೀಗ ಮದುವೆ ವಯಸ್ಸು. ಯಾವುದಾದರೂ ಒಳ್ಳೇ ಹುಡುಗಿ ನೋಡಿ ಮದುವೆಯಾಗಿ ಬಿಡು. ನಿನಗೂ ಒಳ್ಳೇದು ಊರವರಿಗೂ ಕ್ಷೇಮ' ಎಂದು ಊರಲ್ಲೇ ಹಿರಿಯಳಾದ ನಾಗಜ್ಜಿ ಬಂದು ಸುಬ್ರೀತನಿಗೆ ವ್ಯರ್ಥವಾಗಿ ಬುದ್ಧಿ ಹೇಳಿ ಕವಳ ಹಾಕಿಕೊಂಡು ಹೋಗಿದ್ದಳು.

ಶಂಭೂಕಾಕನಗೆ ತನ್ನ ಹೆಂಡತಿಯ ತಮ್ಮನ ಮಗಳನ್ನೇ ಸುಬ್ರೀತನಿಗೆ ಸೋದರಕ್ಕೆ ತಂದುಕೊಳ್ಳಬೇಕೆಂಬ ಮನಸ್ಸಿತ್ತು. ಸುಬ್ರೀತನ ಸೋದರ ಮಾವನ ಮಗಳು ಸುಬ್ಬಿ ನೋಡುವುದಕ್ಕೆ ಐವತ್ತು ಪರ್ಸಂಟ್ ಮಾತ್ರ ಸುಂದರಿಯಾಗಿ ಇದ್ದಳು. ಉಳಿದಿದ್ದು ದೇವರೇಗತಿ! ಬಣ್ಣ ಕಪ್ಪು. ಕಣ್ಣು ಸ್ವಲ್ಪ ಕಂದೀಲು, ಕಿವಿ ಹುಟ್ಟಿದಾರಭ್ಯ ಸ್ವಲ್ಪ ದೂರ, ಬಾಯಲ್ಲಿ ಇನ್ನೂ ಹತ್ತೆಂಟು ಹಲ್ಲುಗಳು ಗಟ್ಟಿಯಾಗಿಯೇ ಇದ್ದವು. ಮುದ್ದು ಭಾಷೆ, ಫ್ಯಾಶನ್ನಿಗೆ ಅಂತ ಮೋಟು ಜಡೆ, ನಡೆಯುವಾಗ ಮದಗಜಗಮನೆ ಇಷ್ಟು ಬಿಟ್ಟರೆ ಉಳಿದೆಲ್ಲವೂ ಸರಿಯಾಗಿಯೇ ಇದ್ದವು. ಸುಬ್ಬಿ ಯಾರೂ ಮದುವೆಯಾಗಲೊಪ್ಪದ ಶುದ್ಧ ಹಳ್ಳೀ ಹೆಣ್ಣು. ಅವಳು ಸುಬ್ರೀತನಿಗೆ ಖಂಡಿತ ಮನಸ್ಸಿರಲಿಲ್ಲ. ಸೋದರ ಮಾವನ ಮಗಳೊಂದನ್ನು ಬಿಟ್ಟು ಬೇರೆ ಯಾರನ್ನು ಬೇಕಾದರೂ ಮದುವೆಯಾಗ್ತೇನೆ ಅಂತಿದ್ದ ಸುಬ್ರೀತ!

ದೊಡ್ಡ ದೊಡ್ಡ ಉದ್ಯೋಗದಲ್ಲಿರುವವರಿಗೇ ಮದುವೆಯಾಗಲು ಹೆಣ್ಣು ಸಿಗುವುದು ಕಷ್ಟವಾಗಿರುವ ಇಂದಿನ ದಿನಗಳಲ್ಲಿ ಸುಬ್ರೀತನಂತಹ ನಿರಕ್ಷರಕುಕ್ಷಿಗೆ ಮದುವೆ ಕನಸಿನ ಮಾತೇ ಸರಿಎಂದು ಭಾವಿಸಿದವರೇ ಹೆಚ್ಚು. ಇದನ್ನೊಂದು ಸವಾಲಾಗಿ ಸ್ವೀಕರಿಸಿ ಒಳ್ಳೇ ಹೆಣ್ಣು ಹುಡುಕಿ ಸುಬ್ರೀತನ ಮದುವೆ ಮಾಡಿಯೇ ಮಾಡ್ತೇನೆ ನೋಡ್ತಾ ಇರಿ ಎಂದು ಟೊಂಕಕಟ್ಟಿ ನಿಂತೇ ಬಿಟ್ಟ ಸುಬ್ರೀತನ ಸೋದರ ಮಾವ ಕೊಂಬೆರಾಯ. ತನ್ನ ಮಗಳನ್ನು ಒಪ್ಪದಿದ್ದುದಕ್ಕೆ ಮನಸ್ಸಿನಲ್ಲಿ ಸಣ್ಣ ಬೇಸರವೂ ಇತ್ತು ಕೊಂಬೆರಾಯನಿಗೆ! ಕೊಂಬೆರಾಯ ತನ್ನ ಸರ್ವೀಸಿನಲ್ಲಿ ನೂರಾರು ಮದುವೆ ಮಾಡಿಸಿದ ಅನುಭವಿ. ಹಾರುವ ಹಕ್ಕಿಗೆ ಉರುಳು ಹಾಕಬಲ್ಲ ಮೇಧಾವಿ. ಆತನಗೆ ಸುಬ್ರೀತನ ಮದುವೆ ಯಾವ ಲೆಕ್ಕ?

ಶಂಭೂಕಾಕನ ಜೊತೆ ಆಪ್ತಾಲೋಚನೆಯ ನಂತರ ಒಂದಿಪ್ಪತ್ತು ಕಡೆಯ ಕನ್ಯಾಪಿತೃಗಳ ಜತೆ ಮಾತಾಡಿ ಜಾತಕ ತಂದು ಮೇಳಾಮೇಳಿ ನೋಡಿಸಿದ. ಸಾಮಾನ್ಯವಾಗಿ ಎಲ್ಲವೂ ಕೂಡಿಬಂದ ಜಾತಕಗಳೇ! ಕೊಂಬೆರಾಯ ತನ್ನ ಸೋದರಳಿಯನ್ನು ಕರೆದುಕೊಂಡು ಹೋಗಿ ಹೆಣ್ಣು ತೋರಿಸಿಯೂ ಆಯಿತು. ಎಲ್ಲಾ ಕಡೆಯಿಂದಲೂ ಒಂದೇ ಬಗೆಯ ಹಾಡು. ಒಂದೇ ರೀತಿಯ ನಕಾರಾತ್ಮಕವಾದ ಉತ್ತರ! ಹುಡುಗಿಯರಿಂದಲೇ ತಮಗೆ ಈ ವರ ಬೇಡ, ಈ ಸಂಬಂಧವೇ ಬೇಡ, ಈ ಕೋತಿಯನ್ನು ನಾನಂತೂ ಮದುವೆಯಾಗಲಾರೆ, ಈ ಸುಬ್ರೀತನನ್ನು ಮದುವೆಯಾಗುವುದಕ್ಕಿಂತ ಹಾಳುಬಾವಿ ಬಿದ್ದು ಸಾಯುವುದು ಛಲೋ!, ಸಕಲಗುಣ ಸಂಪನ್ನ ಸುಬ್ರೀತನಿಗೆ ಮದುವೆ ಬೇರೆ ಕೇಡು ಇತ್ಯಾದಿ ತರಹೇವಾರಿ ಉತ್ತರಗಳು ಬರತೊಡಗಿದವು. ಒಂದೊಂದು ಉತ್ತರ ಬಂದಾಗಲೂ ಸುಬ್ರೀತನ ಬಿ. ಪಿ. ಏರುತ್ತಿತ್ತು. ಓರ್ವ ಕನ್ಯಾಮಣಿಯ ಮನೆಗೆ ಹೆಣ್ಣು ನೋಡಲು ಹೋದಾಗಲಂತೂ ವಧು ಪರೀಕ್ಷೆಯ ಬದಲಾಗಿ ಸುಬ್ರೀತನ ಪರೀಕ್ಷೆಯೇ ನಡೆದು ಹೋಯಿತು. ಎದೆ ಸೀಳಿದರೆ ಕಾಳಕ್ಷರವಿಲ್ಲ ಈತನಿಗೆ ಮದುವೆಯಾಗಬೇಕಂತೆ ಎಂದು ಹುಡುಗಿ ನಕ್ಕಿದ್ದೂ ಅಲ್ಲದೆ ಸುಮ್ಮನೆ ಮದುವೆ ಆಸೆ ಬಿಟ್ಟುಬಿಡಿ ಎಂದು ಸುಬ್ರೀತ ಹಾಗೂ ಕೊಂಬೆರಾಯನೆದುರಿಗೇ ಹೇಳುವುದೇ? ಹೆಣ್ಣಿನ ಮನೆ ಎಂದು ಹೆಚ್ಚಿಗೆ ಮಾತಾಡದೆ ಇಬ್ಬರೂ ಸುಮ್ಮನೆ ಮನೆಗೆ ಬಂದರು ತನ್ನ ಸ್ವಾಭಿಮಾನ ಕೆಣಕಿದ ಹೆಣ್ಣಿನ ಮೇಲೆ ಆಕ್ರೋಶ ವ್ಯಕ್ತಪಡಿಸಿ ಸಿಟ್ಟಿನಿಂದ ಕೂಗಾಡಿದ ಸುಬ್ರೀತ !

ನಾನು ಮದುವೆಯಾಗಿಯೇ ಆಗುತ್ತೇನೆ. ಈ ಸೊಕ್ಕಿನ ಹುಡುಗಿಯರಿಗೆ ಬುದ್ಧಿ ಕಲಿಸುತ್ತೇನೆ. ನನ್ನನ್ನು ಏನು ಅಂತ ತಿಳಿದಿದ್ದಾರೆ ಇವರೆಲ್ಲ? ಸುಬ್ರೀತನ ಸಿಟ್ಟು ನೆತ್ತಿಗೇರಿತು.

ಆಗೋದೆಲ್ಲ ಆಯ್ತು. ಅವಮಾನ ಆಗುವಷ್ಟು ಆಗಿಯೇ ಹೋಯ್ತು. ಮಾನ ಮರ್ಯಾದೆ ಎಲ್ಲಾ ಹರಾಜಾಗಿ ಛಪ್ಪನ್ ಚೂರಾಗಿ ಹೋಯ್ತು. ಇನ್ನು ಯಾರನ್ನು ಮದುವೆಯಾಗ್ತೀಯೋ ಸುಬ್ರೀತಾ? ಶಂಭೂಕಾಕ ಮನೆಯಲ್ಲಿ ಕುಳಿತು ತಣ್ಣಗೆ ಕೇಳಿದ.

ಮದುವೆಯಾಗ್ತೇನೆ. ಮಾವನ ಮಗಳು ಸುಬ್ಬಿ!

ಶಂಭೂಕಾಕನಿಗೆ ಒಳಗೊಳಗೇ ಖುಷಿ! ಸುದ್ದಿ ಕೇಳಿದ ಕೊಂಬೆರಾಯ ನೆಲದ ಮೇಲೇ ಇರಲಿಲ್ಲ. ವಾಲಗ ಊದಿಸಿಯೇ ಬಿಟ್ಟರು ಇಬ್ಬರೂ ಸೇರಿ!

ಸುಮುಹೂರ್ತೇ ಸಾವಧಾನ!